
ಸೆಂಟರ್ ಇರಲೇಬೇಕು. ನಾವು ನಮ್ಮ ಶಾಲಾ ಕಾಲೇಜು ದಿನಗಳನ್ನೆಲ್ಲ ಒಟ್ಟು ಸೇರಿಸಿದರೂ ನಮ್ಮ ಮೇಷ್ಟ್ರುಗಳು ನಮ್ಮ ಬುದ್ಧಿಮಟ್ಟ ಪರೀಕ್ಷಿಸಲು ಅಷ್ಟು ಟೆಸ್ಟ್‌ಗಳನ್ನು ನಮ್ಮ ಬ್ರೇನ್ ಮೇಲೆ ಪ್ರಯೋಗ ಮಾಡಿರಲಿಕ್ಕಿಲ್ಲ. ಆದರೆ ಡಯಾಗ್ನಾಸ್ಟಿಕ್ ಸೆಂಟರ್‌ಗಳಲ್ಲಿ ಡಾಕ್ಟರ್ ಎನ್ನುವ ಭೂಲೋಕದ ದೇವರ ಆದೇಶದ ಮೇರೆಗೆ ಒಂದೇ ಬಾಡಿ ಮೇಲೆ ಅದ್ಯಾವ ಪರಿ ಟೆಸ್ಟ್‌ಗಳನ್ನು ಮಾಡ್ತಾರೆ ಎಂದರೆ ಹೇಳತೀರದು. ಹೀಗೆ ಒಂದು ಡಯಾಗ್ನಾಸ್ಟಿಕ್ ಸೆಂಟರ್ ಮುಂದೆ ತಮ್ಮಲ್ಲಿ ಯಾವೆಲ್ಲ ಟೆಸ್ಟ್‌ಗಳನ್ನು ಮಾಡಲಾಗುತ್ತದೆ ಎಂದು ಬೋರ್ಡ್ ಹಾಕಿದ್ದರು. ಬ್ಲಡ್ ಟೆಸ್ಟ್, ಯೂರಿನ್ ಟೆಸ್ಟ್, ಸ್ಟೂಲ ಟೆಸ್ಟ್, ಕಾರ್ಡಿಯಾಕ್ ಟೆಸ್ಟ್, ಅಲ್ಟ್ರಾಸೌಂಡ್ ಹಾಗೂ ಮತ್ತಿತರ ಟೆಸ್ಟ್‌ಗಳನ್ನು ಆ ಬೋರ್ಡ್ ಮೇಲೆ ಬರೆದಿದ್ದರು.

ಪಟ್ಟಣಕ್ಕೆ ಬಂದ ನಮ್ಮ ಹಳ್ಳಿ ಪುಟ್ಟ (ವಯಸ್ಸಿನಿಂದಲ್ಲ) ಆ ಬೋರ್ಡ್ ಓದಿ ಸೀದಾ ಮನೆಗೆ ಬಂದು ತನ್ನ ಸ್ಟೂಲ್ ತೆಗೆದುಕೊಂಡು ಡಯಾಗ್ನಾಸ್ಟಿಕ್ ಸೆಂಟರ್ ತಲುಪಿದ. ಫೀಸ್ ಕೌಂಟರ್‌ಗೆ ಹೋಗಿ ಸ್ಟೂಲ ಟೆಸ್ಟ್ ಮಾಡಿಸಲು ಫೀಸ್ ಕೂಡ ಕಟ್ಟಿದ. ಪೆಥಾಲಜಿಸ್ಟ್ ಅಸಿಸ್ಟೆಂಟ್ ಬಂದು ಅವನಿಗೆ 'ನಿಮ್ಮ ಟೆಸ್ಟ್ ಸ್ಯಾಂಪಲ್ ಕೊಡಿ' ಎಂದು ಕೇಳಿದಾಗ ತಾನು ತಂದಿರುವ ಕಟ್ಟಿಗೆಯ ಸ್ಟೂಲನ್ನು ಅವಳ ಕೈಗೆ ಕೊಟ್ಟ. 'ಇದನ್ಯಾಕೆ ಕೊಡ್ತಾ ಇದ್ದೀರಾ? ನಿಮ್ಮ ಸ್ಟೂಲ್ ಸ್ಯಾಂಪಲ್ ಕೊಡಿ' ಎಂದಾಗ, 'ಬರೀ ಸ್ಯಾಂಪಲ್ ಅಲ್ಲಾ, ಇಡೀ ಸ್ಟೂಲನ್ನೇ ಹೊತ್ಕೊಂಡು ಬಂದಿದೀನಿ. ರಿಪೇರಿ ಮಾಡಿಸಿದ್ರೂ ಇದರ ಕಾಲು ಮುರಿತಾನೇ ಇದೆ. ಅದೆಂಥಾ ಸ್ಟೂಲ್ ಏನೋ ಕಣವ್ವಾ, ಇದರ ಮರ ಸರಿ ಇದೆಯೋ ಇಲ್ವೋ ವಸಿ ಟೆಸ್ಟ್ ಮಾಡಮ್ಮಿ' ಎನ್ನೋದೆ! 'ಸ್ಟೂಲ್' ಎನ್ನುವ ಇಂಗ್ಲಿಷ್ ಪದ ಕೂಡ ಹೋಮೋನಿಮ್. ಅದಕ್ಕೆ ಎರಡು ಅರ್ಥಗಳು. ಒಂದರ ಅರ್ಥ ಬೆನ್ನಾಸರೆ ಇಲ್ಲದ ಆಸನ. ಇನ್ನೊಂದು ಅರ್ಥ 'ಮಲ'.

ಒಂದು ಸಲ ನಮ್ಮ ಮನೆ ಕೆಲಸದಾಕೆ 'ಅಕ್ಕಾ, ನನ್ನ ಅತ್ತೆನ್ನ ದೇವರಿಗೆ ಕರ್ಕೊಂಡು ಹೋಗಬೇಕು. ನಿಮ್ಮಿಂದ ವಸಿ ಸಹಾಯ ಆಗ್ಬೇಕಾಗಿತ್ತು' ಅಂತ ಅಂದ್ಳು. ಸರಿ, ಏನು ಹೇಳು ಅಂದೆ. 'ನಾನು ನಿಮಗೆ ಟಿಕೆಟ್ ಕಾಸು ಕೊಡ್ತೀನಿ, ಆನ್‌ಲೈನ್ ಟ್ರೈನ್ ಟಿಕೆಟ್ ಬುಕ್ ಮಾಡಿ ಕೊಡಿ' ಅಂದ್ಳು. ಸರಿ, ಎಂದು ಆನ್‌ಲೈನ್ ಬುಕಿಂಗ್ ವೆಬ್‌ಸೈಟ್ ಓಪನ್ ಮಾಡಿದೆ. ನಿನ್ನಿಂದ ಒಂದಾದಾಗಿ ಮಾಹಿತಿ ಕೇಳ್ತೀನಿ, ನೀನು ಹೇಳ್ತಾ ಹೋಗು, ನಾನಿಲ್ಲಿ ಎಂಟರ್ ಮಾಡುವೆ ಎಂದು ಅವಳು ಹೋಗುವ ಊರಿನ ಹೆಸರು ಕೇಳಿದೆ. ಡೇಟ್ ಆಫ್ ಬರ್ತ್ ಹೇಳು ಅಂದೆ. ಅವಳಿಗರ್ಥವಾಗುತ್ತೋ ಇಲ್ವೋ ಅಂತ ಕನ್ನಡದಲ್ಲಿ ಹೇಳಲು ಹೊರಟ ನನ್ನನ್ನು ತಡೆದು, 'ಅಕ್ಕಾ ನನಗೂ ಅಷ್ಟು ಇಷ್ಟು ಇಂಗ್ಲಿಷ್ ಅರ್ಥ ಆಗತ್ತೆ, ಬರ್ತ್ ಅಂದ್ರೆ ಹುಟ್ಟೋದು, ಡೇಟ್ ಆಫ್ ಬರ್ತ್ ಅಂದ್ರೆ ಹುಟ್ಟಿದ ತಾರೀಕು, ಅಲ್ವಾ ಅಕ್ಕಾ' ಅಂತ ಹೇಳಿ ತಮ್ಮಿಬ್ಬರದೂ ಡೇಟ್ ಆಫ್ ಬರ್ತ್ ಹೇಳಿದ್ಳು. ಮುಂದುವರೆದು 'ಅಕ್ಕಾ, ಟ್ರೈನಲ್ಲಿ ಏಸಿ ಬೋಗಿ ಇರುತ್ತೆ ಅಲ್ವಾ ಅದನ್ನೇ ಬುಕ್ ಮಾಡಿ' ಅಂದ್ಳು. ಅದಕ್ಕೆ ದುಡ್ಡು ಜಾಸ್ತಿ ಅಂದೆ.

ಅದಕ್ಕವಳು, 'ಅತ್ತೆನ್ನ ಈಗ ಏಸಿ ಟ್ರೈನಲ್ಲಿ ಕರ್ಕೊಂಡು ಹೋದ್ರೆ ಮುಂದೆ ಆಸ್ತಿಲೀ ನಮಗೆ ಜಾಸ್ತಿ ಪಾಲು ಕೊಟ್ರೂ ಕೊಡಬಹುದು' ಅಂತ ಹಲ್ಲು ಕಿರಿದಳು. ತುಂಬಾ ಪ್ಲಾನಿಂಗ್ ಬಿಡು ನಿಂದು ಅಂತ ನಾನೂ ನಕ್ಕು ಥ್ರೀ ಟೈರ್ ಏಸಿ ಕೋಚ್‌ನಲ್ಲಿ ಎರಡು ಸೀಟ್ ರಿಸರ್ವ್ ಮಾಡಿ, ನಿನ್ನದು ಮಿಡಲ್ ಬರ್ತ್, ನಿನ್ನ ಅತ್ತೆದು ಲೋವರ್ ಬರ್ತ್, ನೆನಪಿಟ್ಕೋ. ಟಿಸಿ ಬಂದು ಕೇಳಿದ್ರೆ ನಿಮ್ಮಿಬ್ಬರದು ಯಾವ ಬರ್ತ್ ಅಂತಾ ಹೇಳು ಅಂದೆ. ಅದನ್ನು ಕೇಳಿದ ಅವಳು 'ಅಯ್ಯೋ ಇಲ್ಲ ಅಕ್ಕಾ, ನಾನು ಮತ್ತು ನನ್ನ ಅತ್ತೆ ಇಬ್ಬರೂ ನಾರ್ಮಲ್ ಹೆರಿಗೆಯಿಂದ ಹುಟ್ಟಿದ್ದು. ಹಾಗಾಗಿ ನಮ್ಮಿಬ್ಬರದೂ ನಾರ್ಮಲ್ ಬರ್ತ್. ಅಲ್ಲಾ ಅಕ್ಕಾ, ನನಗ ಗೊತ್ತಿರೋದು ನಾರ್ಮಲ್ ಬರ್ತ್ ಮತ್ತೆ ಸೀಸನ್ ಬರ್ತ್ (ಸಿಸೇರಿಯನ್) ಮಾತ್ರ. ಈಗ ಲೋವರ್ ಬರ್ತ್, ಮಿಡಲ್ ಬರ್ತ್ ಅಂತೆಲ್ಲ ಇದೇನಾ? ಅಷ್ಟಕ್ಕೂ ನಾವು ಹೆಂಗಾದ್ರೂ ಹುಟ್ಟಿರಲಿ ಅದನ್ನ ಕಟ್ಕೊಂಡು ಈ ಟಿಸಿ ಯಪ್ಪಾ ಏನ್ ಮಾಡ್ತಾನೆ. ಈ ರೇಲ್ವೆಯವರು ನಮಗೊಂದು ಟಿಕೆಟ್ ಕೊಡಲಿಕ್ಕೆ ನಾವು ಹೆಂಗ ಹುಟ್ಟಿದ್ವಿ ಅಂತಾನೂ ಹೇಳ್ಬೇಕಾ ಇವರಿಗೆ? ಇದ್ಕಿಂತ ನಮ್ಮ ಕೆ.ಎಸ್.ಆರ್.ಟಿ.ಸಿ. ಕಂಡಕ್ಟರಪ್ಪನೇ ಒಳ್ಳೆವ್ನು ಬಿಡಿ, ನಾವು ಯಾವ ತರಹ ಹುಟ್ಟಿದ್ವೀ ಅಂತಾ ಗೊಡವೆಗೆ ಹೋಗೋದಿಲ್ಲ' ಎಂತದವಳು ನನ್ನ ಸಮಜಾಯಿಷಿಗೂ ಕಾಯದೆ ತನ್ನ ಕೆಲಸ ಶುರು ಮಾಡಿದಳು. ಇಂಗ್ಲಿಷ್‌ನಲ್ಲಿ **BERTH** ಮತ್ತು **BIRTH** ಎನ್ನುವ ಪದಗಳು ಹೋಮೋಫೋನ್ಸ್. ಎರಡದ್ದೂ ಒಂದೇ ಉಚ್ಚಾರಣೆ. ಆದರೆ ಸ್ಪೆಲ್ಲಿಂಗ್ ಹಾಗೂ ಅರ್ಥ ಬೇರೆ ಬೇರೆ.



ನಾನು ಬೆಂಗಳೂರಿಗೆ ಬಂದ ಹೊಸತರಲ್ಲಿ ನಡೆದ ಪ್ರಸಂಗವಿದು. ಇಲ್ಲಿ ಹವೀಜ ಎನ್ನಲು ಧನಿಯಾ ಅಂತಾರೆ ಎಂದು ಮನೆ ಮಾಲೀಕರಿಂದ ತಿಳಿದಿತ್ತು. ಮನೆ ಪಕ್ಕದಲ್ಲಿದ್ದ ಕಿರಾಣಿ ಅಂಗಡಿಗೆ ಹೋಗಿ ಧನಿಯಾ ಕೊಡಿ ಎಂದೆ. ಎಷ್ಟು ಬೇಕು ಎಂದ ಅಂಗಡಿಯವನು. ಪಾವು ಕೆ.ಜಿ. ಕೊಡಿ ಎಂದೆ. ಕಾಲು ಕೆ.ಜಿ.ನಾ ಎಂದ. ಕಾಲು ಎಂದರೆ ಪಾವು ಅಂತ ನನಗೆ ತಿಳಿದಿರಲಿಲ್ಲ. ಕಾಲು ಎಂದರೆ ಮನುಷ್ಯನ ದೇಹದ ಭಾಗ ಎಂಬುದು ಮಾತ್ರ ನನಗೆ ಗೊತ್ತಿತ್ತು. ಕಾಲು ಕೆ.ಜಿ. ಎಂದರೆ ಬಹುಶಃ ಮನುಷ್ಯನ ಕಾಲಿನ ತೂಕದಷ್ಟು ಇರಬಹುದು ಎಂದು ಲೆಕ್ಕಾಚಾರ ಹಾಕಿ ಅಷ್ಟೊಂದು ಹವೀಜ ತೆಗೆದುಕೊಂಡು ಏನು ಮಾಡೋದು. ಅದಕ್ಕೆ ಕಾಲು ಕೆ.ಜಿ. ಬೇಡ ಎಂದೆ. ಆದರೆ ಪಾವು ಕೆ.ಜಿ. ಎನ್ನಲು ಬೆಂಗಳೂರು ಭಾಷೆಯಲ್ಲಿ ಹೇಗೆ ಹೇಳಬೇಕೆಂದು ತಿಳಿಯದೇ ಒದ್ದಾಡಿದೆ. ಇಂಗ್ಲಿಷ್‌ನಲ್ಲಿ ಹೇಳಿದ್ರೆ ಅರ್ಥ ಆಗಿರೋದು, ಆದ್ರೆ ಬೆಂಗಳೂರಿನಲ್ಲಿ ಕನ್ನಡಕ್ಕಿಂತ ಇಂಗ್ಲಿಷ್ ಹೆಚ್ಚು ಓಡೋದು ಅಂತ ಆಗಿನ್ನೂ ನನಗೆ ತಿಳಿದಿರಲಿಲ್ಲ. ಇಂಗ್ಲಿಷ್ ಮಾತಾಡಿದ್ರೆ ಜಂಬ ಅನ್ಕೋತಾರೇನೋ ಎಂದು ಒಂದು ನಿರ್ಧಾರಕ್ಕೆ ಬಂದೆ. ನನ್ನ ಪಾವು ಕೆ.ಜಿ.ಯಷ್ಟು ಕಡಿಮೆನೂ ಬೇಡ ಇವನ ಕಾಲು ಕೆ.ಜಿ.ಯಷ್ಟು ಹೆಚ್ಚೂ ಬೇಡ, ಒಂದು ಕೆ.ಜಿ. ತೊಗೊಂಡರಾಯ್ತು ಎಂದು ಒಂದು ಕೆ.ಜಿ. ಹವೀಜ ತೊಗೊಂಡು ಬಂದಿದ್ದೆ. ಎಷ್ಟೋ ವರ್ಷಗಳ ಹಿಂದೆ ಹೀಗೆ ಲೆಕ್ಕಾಚಾರ ಹಾಕಿ ತೆಗೆದುಕೊಂಡು ಬಂದ ಒಂದು ಕೆ.ಜಿ. ಹವೀಜ ಇವತ್ತಿಗೂ ಬಳಸ್ತಾ ಇದೀನಿ ಗೊತ್ತಾ! ನಾನಾರ್ಥಕ ಪದವಾದ 'ಕಾಲು' ಇಂತಹ ಅನರ್ಥಕ್ಕೆ ದಾರಿ ಮಾಡಿಕೊಟ್ಟಿತು.

ಒಟ್ಟಿನಲ್ಲಿ ಉಚ್ಚಾರಣೆ ಒಂದೇ ಆದರೂ ಬೇರೆ ಬೇರೆ ಅರ್ಥ ಕೊಡುವ ಈ ನಾನಾರ್ಥಕಗಳು (ಹೋಮೋನಿಮ್ಸ್ ಹಾಗೂ ಹೊಮೋಫೋನ್ಸ್) ಮಾಡುವ ಅನರ್ಥಗಳು ಅಷ್ಟಿಷ್ಟಲ್ಲ.

ಪ್ರತಿಕ್ರಿಯಿಸಿ: **feedback@sudha.co.in**